ಶ್ರೀ ಕೆ.ಎಂ.ಕೃಷ್ಣಮೂರ್ತಿ:– ನಾನು ನನಗೆ ಅವಕಾಶ ಕೊಡಿ ಎಂದು ಕೇಳುತ್ತಲೇ ಬಂದಿದ್ದೇನೆಯಾದರೂ ನನಗೆ ಅವಕಾಶವನ್ನೇ ಕೊಡುತ್ತಿಲ್ಲ. ಆಡಳಿತ ಪಕ್ಷದವರು ಮಾತನಾಡಬಾರದು ಎಂದು ನಿಯಮವಿದೆಯೇ?

ಅಧ್ಯಕ್ಷರು:– ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗಿಬಿಟ್ಟಿದೆ. ಬಜೆಟ್ ಮೇಲೆ ಮಾತನಾಡುವಿರಂತೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಸಭಾಧ್ಯಕ್ಷರಾದ ತಾವು ಸಭೆಯನ್ನು ಕಂಟ್ರೋಲ್ ಮಾಡಬೇಕು.

ಅಧ್ಯಕ್ಷರು:– ಏನ್ ನೀವು ನನಗೆ ಕಂಟ್ರೋಲ್ ಮಾಡಬೇಕು ಎಂದು ಈ ರೀತಿ ಹೇಳುತ್ತಿದ್ದೀರಿ. ಸದಸ್ಯರೆಲ್ಲರೂ ಸಹಕಾರ ಕೊಡಬೇಕೆಂದು ನಾನು ಪದೇ ಪದೇ ವಿನಂತಿ ಮಾಡಿಕೊಂಡರೂ ಎಲ್ಲರೂ ಒಮ್ಮೆಲೆ ಎದ್ದುನಿಂತು ಮಾತನಾಡಲು ಹೋದರೆ ಏನ್ ಕಂಟ್ರೋಲ್ ಮಾಡುವುದು? ಈ ರೀತಿ ಸದಸ್ಯರುಗಳೇ ಸಹಕಾರ ಕೊಡುತ್ತಿಲ್ಲದಿರುವಾಗ ನಾನೇನು ಕಂಟ್ರೋಲ್ ಮಾಡುವುದು. ಏನು ಮಾಡುವುದು ಹೇಳಿ ಸ್ವಾಮಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ತಾವು ಸದಸ್ಯರಿಗೆ ಮಾತನಾಡುವುದನ್ನು ಬೇಗ ಮುಗಿಸಿ ಎಂದು ಹೇಳಿ. ನಾನು ಈಗಾಗಲೇ ಮೂರು ಸಾರಿ ಪ್ರಶ್ನೆ ಹಾಕಿದ್ದೇನೆ. ಮೂರು ಬಾರಿ ಪ್ರಶ್ನೆ ಹಾಕಿದರೂ ಅದಕ್ಕೆ ತಮ್ಮಿಂದ ಉತ್ತರ ಬಂದಿಲ್ಲ. ಮಂತ್ರಿಗಳಿಂದಲೂ ಉತ್ತರ ಬಂದಿಲ್ಲ.

ಅಧ್ಯಕ್ಷರು:– ಕೃಷ್ಣಮೂರ್ತಿಯವರೆ, ತಾವು ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೋರಿ ಪತ್ರ ಕಳುಹಿಸಿಕೊಡಿ. ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಪ್ರಶ್ನೋತ್ತರ ಒಂದು ಗಂಟೆಯಲ್ಲಿ ಮುಗಿಸಬೇಕು. ಆದರೆ ಹೆಚ್ಚು ಕಾಲ ತೆಗೆದುಕೊಂಡಾಗ ನಮಗೆ ಅವಕಾಶ ಸಿಗುವುದಿಲ್ಲ. ಆದಕಾರಣ ನನಗೆ ಚರ್ಚೆಗೆ ಬೇರೆ ನಿಯಮದಡಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಆಯಿತು. ತಾವು ಬೇರೆ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಕೋರಿ ಪತ್ರ ಕಳುಹಿಸಿಕೊಡಿ. ನಾನು ಅರ್ಧ ಗಂಟೆ ಕಾಲಾವಧಿಯಲ್ಲಿ ತೆಗೆದುಕೊಳ್ಳಲು ಚರ್ಚೆಗೆ ಅವಕಾಶ ಕೊಡುತ್ತೇನೆ. ತಾವು ಈಗ ಕುಳಿತುಕೊಳ್ಳಿ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ):– ಮಾನ್ಯ ಅಧ್ಯಕ್ಷರೆ, ಒಂದು ಕೊಲೆ ಪ್ರಕರಣದಲ್ಲಿ ಖೊಟ್ಟಿ ಸರ್ಟಿಫಿಕೇಟ್ ಅಧಿಕಾರಿಗಳು ಕೊಟ್ಟಿರುವುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಆದಕಾರಣ ನನಗೆ ತಾವು ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಆಯಿತು. ತಾವು ಮಾತನಾಡಿ.

ಖೂ) ವಿಷಯ:– ಬ್ಯಾಡಗಿ ತಾಲ್ಲೂಕಿನ ಕಾಟೇನಹಳ್ಳಿಯಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಖೊಟ್ಟಿ ಸರ್ಟಿಫಿಕೇಟ್ ನೀಡಿರುವ ಬಗ್ಗೆ.

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ):– ಮಾನ್ಯ ಅಧ್ಯಕ್ಷರೆ, 2003ರಲ್ಲಿ ಬ್ಯಾಡಗಿ ತಾಲ್ಲೂಕಿನ ಕಾಟೇನಹಳ್ಳಿ ಗ್ರಾಮದಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ಒಂದು ಕೊಲೆ ಪ್ರಕರಣ ನಡೆದಿದೆ. ಅದರಲ್ಲೂ ಪರಿಶಿಷ್ಟ ಜಾತಿಯ ಹೆಣ್ಣು ಮಗಳ ಮೇಲೆ ಕೆಲವು ಕಿಡಿಗೇಡಿಗಳು ದೌರ್ಜನ್ಯ ಮಾಡಿ ಕೊಲೆಯನ್ನು ಮಾಡುವುದಕ್ಕೆ ಪ್ರಯತ್ನವನ್ನು ಪಟ್ಟರು. ಆ ಮಹಿಳೆಯನ್ನು ಹರಿತವಾದ ಕೊಡಲಿಯಿಂದ ಹೊಡೆದು ಅವಳನ್ನು ಕೆರೆಗೆ ಉರುಳಿಸಿದ್ದಂಥ ಘಟನೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಅಲ್ಲಿ ಸೆಕ್ಷನ್ 307 ರ ಪ್ರಕಾರ ಕೇಸ್ ಕೂಡ ದಾಖಲಾಗಿದೆ. ಆ ಸಂದರ್ಭದಲ್ಲಿ ಆ ಮಹಿಳೆ ಸುಮಾರು ಮೂರು

ತಿಂಗಳ ನಂತರ ಆಸ್ಪತ್ರೆಯಲ್ಲಿ ಅಸುನೀಗಿದ್ದಾಳೆ. ಆ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವಳ ಸಾವನ್ನು ಸಹಜ ಸಾವು ಎಂದು ಸರ್ಟಿಫಿಕೇಟ್‌ನ್ನು ಕೊಟ್ಟು ಆ ಕೇಸ್‌ನ್ನು ಮುಚ್ಚು ಹಾಕುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಹೀಗಾಗಿ ಇಂದು ಜನರಲ್ಲಿ ಸರ್ಕಾರದ ಬಗ್ಗೆ ಅಪನಂಬಿಕೆ ಮೂಡುತ್ತಿದೆ. ಅಂಥ ವಿಚಾರವನ್ನು ಮಾಡುವಂಥ ಪರಿಸ್ಥಿತಿ ಇಂದು ಪರಿಶಿಷ್ಟ ಜಾತಿಯ ಜನರಲ್ಲಿ ಬಂದಿದೆ. ಏಕೆಂದರೆ ಹಾಡುಹಗಲಿನಲ್ಲಿಯೇ ಕೊಲೆಯಾದಂಥ ಪ್ರಕರಣವನ್ನು ಮುಚ್ಚಿ ಹಾಕುವಂಥ ವ್ಯವಸ್ಥೆಯನ್ನು ಈ ಸರ್ಕಾರದಲ್ಲಿರುವಂಥ ಅಧಿಕಾರಿಗಳು ಮಾಡುತ್ತಾರೆಂದರೆ ಇದೊಂದು ಗಂಭೀರವಾದ ವಿಚಾರವಾಗಿದೆ. ಆದಕಾರಣ ಈ ಬಗ್ಗೆ ಸಿ.ಓ.ಡಿ. ತನಿಖೆಯನ್ನು ಮಾಡಬೇಕು ಮತ್ತು ಖೊಟ್ಟಿ ಸರ್ಟಿಫಿಕೇಟ್ ಕೊಟ್ಟಿರುವಂಥ ಡಾ:ಉದಾಸಿಮಠ್‌ರವರನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು ಮತ್ತು ಅವರನ್ನು ಬಂಧಿಸಬೇಕು ಮತ್ತು ಈಗಾಗಲೇ ಈ ಕೇಸ್‌ನ್ನು ಮುಚ್ಚಿಹಾಕಲು ಪ್ರಯತ್ನವನ್ನು ಮಾಡಿದ್ದಾರೆ ಅಂಥವರ ಮೇಲೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ಸದಸ್ಯರಲ್ಲಿ ಹೇಳುವುದೇನೆಂದರೆ ಇಂಥ ಮಹತ್ವವಾದ ವಿಚಾರಗಳ ಬಗ್ಗೆ ಪ್ರಸ್ತಾಪಿಸಲು ಅಧ್ಯಕ್ಷರಿಗೆ ಮೊದಲೇ ಲಿಖಿತ ರೂಪದಲ್ಲಿ ಕೊಟ್ಟು ಅವರ ಗಮನಕ್ಕೆ ತರಬೇಕು. ಆ ರೀತಿ ಕೊಟ್ಟಿಲ್ಲದಿದ್ದರೂ ಕೂಡ ಇಂದು ಮಾನ್ಯ ಅಧ್ಯಕ್ಷರೆ, ತಾವು ಲೀನಿಯೆಂಟ್ ಆಗಿ ಎಲ್ಲರಿಗೂ ಪ್ರಸ್ತಾಪ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಈಗ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ತನಿಖೆ ಮಾಡಿ ನೋಡುತ್ತೇನೆ. ಇವರು ಮಾತನಾಡುವ ಮುಂಚೆಯೇ ತರೀಕೆರೆ ಶಾಸಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕೇಳಿದ್ದಾರೆ. ಅವರಿಗೂ ಕೂಡ ತಾವು ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರು ಸದನವನ್ನು ನಡೆಸುತ್ತಿರುವಂಥ ಕಾಲದಲ್ಲಿ ಎಲ್ಲಾ ಸದಸ್ಯರುಗಳು ಅವರಿಗೆ ಸಹಕಾರವನ್ನು ಕೊಟ್ಟು ಸಂತೋಷದಿಂದ ಇರಬೇಕು. ಇನ್ನು ಮುಂದೆ ಎಲ್ಲರೂ ಮಾನ್ಯ ಅಧ್ಯಕ್ಷರಿಗೆ ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಮಾಧುಸ್ವಾಮಿಯವರೆ, ವಿತ್ತೀಯ ಕಾರ್ಯಕಲಾಪಕ್ಕೆ ಮುಂಚೆ ಒಂದು ವಿಧೇಯಕವಿದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಮಂಡಿಸುತ್ತಾರೆ. ಅದು ಆದನಂತರ ತಾವು ವಿತ್ತೀಯ ಕಾರ್ಯಕಲಾಪದಲ್ಲಿ ಮಾತನ್ನು ಪ್ರಾರಂಭ ಮಾಡುವಿರಂತೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಆಯಿತು ಅಧ್ಯಕ್ಷರೆ.

6. ಶಾಸನ ರಚನೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ತಿದ್ದುಪಡಿ) ವಿಧೇಯಕ, 2005

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎನ್. ಧರ್ಮಸಿಂಗ್(ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, "2005 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ: